## ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹಿರೇಕೆರೂರು

**ಉಪಸ್ಥಿತರುಃ ಶ್ರೀಮತಿ ನಾಗರತ್ನಮ್ಮ ಬಿಎಎಲ್., ಎಲ್.ಎಲ್.ಬಿ.**
**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್. ಸಿ.**
**ನ್ಯಾಯಾಲಯ, ಹಿರೇಕೆರೂರು**

**ಅಸಲು ದಾವೆ ಸಂಖ್ಯೆ: 20/2025**

**ದಿನಾಂಕ 03 ನೇ ಜೂನ್, 2025**

ವಾದಿ ಃ ಕೃಷ್ಣಾನಾಯ್ಕ ತಂದೆ ವೆಂಕಣ್ಣನಾಯ್ಕ ಮಲ್ಲೀನಹಳ್ಳಿ,
ವಯಾ: 64 ವರ್ಷ, ಉದ್ಯೋಗ: ವ್ಯವಸಾಯ,
ಸಾ: ಚಿಕ್ಕೇರೂರು, ತಾ: ಹಿರೇಕೆರೂರು, ಜಿ: ಹಾವೇರಿ.

:ವಿರುದ್ಧ:

ಪ್ರತಿವಾದಿಯರು ಃ 1. ಬಸವರಾಜ ತಂದೆ ಈಶ್ವರಪ್ಪ ಲೆಕ್ಕಪ್ಪಳವರ,
ವಯಾ: 49 ವರ್ಷ, ಉದ್ಯೋಗ: ವ್ಯವಸಾಯ,
ಸಾ: ಕೋಟೆ ಓಣಿ, ಚಿಕ್ಕೇರೂರು, ತಾ: ಹಿರೇಕೆರೂರು,
ಜಿ: ಹಾವೇರಿ ಹಾಗೂ ಇತರರು.

**ಮಧ್ಯಂತರ ಅರ್ಜಿ ಸಂಖ್ಯೆ 1**

ಅರ್ಜಿದಾರರು ಃ ಕೃಷ್ಣಾನಾಯ್ಕ ತಂದೆ ವೆಂಕಣ್ಣನಾಯ್ಕ ಮಲ್ಲೀನಹಳ್ಳಿ,

:ವಿರುದ್ಧ:

ಎದುರುದಾರರು ಃ 1. ಬಸವರಾಜ ತಂದೆ ಈಶ್ವರಪ್ಪ ಲೆಕ್ಕಪ್ಪಳವರ ಹಾಗೂ ಇತರರು.

**ಮಧ್ಯಂತರ ಅರ್ಜಿ 1 ರ ಮೇಲೆ ಆದೇಶ**

ಅರ್ಜಿದಾರರು/ವಾದಿಯು ಮಧ್ಯಂತರ ಅರ್ಜಿ ಸಂಖ್ಯೆ-1 ನ್ನು ದಿವಾಣಿ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 39 ನಿಯಮ 1 ಮತ್ತು 2 ರಡಿಯಲ್ಲಿ ಸಲ್ಲಿಸಿ ಏಕತರ್ಫಿ ತುರ್ತು ತಾಕೀಥಿ ಹುಕುಂ ಆದೇಶದ ಮುಖಾಂತರ ಪ್ರತಿವಾದಿಯಾಗಲೀ, ಅಥವಾ ಅವರ ಪರ ಯಾರೇ ಆಗಲಿ ಶೆಡ್ಯೂಲ್ ನಲ್ಲಿ ತೋರಿಸಿದ ಜಮೀನಿಗೆ 'B & C' ದಾರಿಯಲ್ಲಿ ವಾದಿಯು ಹೋಗಿ ಬಂದು ಮಾಡಲು ಟ್ರ್ಯಾಕ್ಟರ್, ಎತ್ತು, ಚಕ್ಕಡಿ ಮತ್ತು ಇನ್ನಿತರೆ ಬೇಸಾಯದ ಸಾಮಾನುಗಳನ್ನು ತೆಗೆದುಕೊಂಡು ಹೋಗಿ ಬಂದು ಮಾಡಲು ಅಡ್ಡಿ

ಆತಂಕಪಡಿಸದಂತೆ ಪ್ರತಿವಾದಿಯರ ವಿರುದ್ದ ಈ ದಾವೆ ಇತ್ಯರ್ಥವಾಗುವವರೆಗೂ ಏಕತರ್ಫಿ ತುರ್ತು ತಾಕೀಥಿ ಹುಕುಂ ಆದೇಶದ ಪರಿಹಾರ ನೀಡಬೇಕೆಂದು ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ.

**2.** ಅರ್ಜಿದಾರರು ಈ ಮಧ್ಯಂತರ ಅರ್ಜಿಯೊಂದಿಗೆ ಪ್ರಮಾಣಪತ್ರವನ್ನು ಸಲ್ಲಿಸಿಕೊಂಡಿದ್ದು, ಈ ದಾವೆಯನ್ನು ವಾದಿಯು ಪ್ರತಿವಾದಿಯರ ವಿರುದ್ಧ ಶಾಶ್ವತ ನಿರ್ಬಂಧಕಾಜ್ಞೆಯ ಕೇಳಿ ಈ ದಾವೆಯನ್ನು ದಾಖಲಿಸಿರುತ್ತಾರೆ. ನಂತರ ಮುಂದುವರೆದು ತನ್ನ ಪ್ರಮಾಣಪತ್ರದಲ್ಲಿ, ಹಾವೇರಿ ಜಿಲ್ಲೆ, ಹಿರೇಕೆರೂರು ತಾಲೂಕು, ಹಂಸಭಾವಿ ಹೋಬಳಿ ಚಿಕ್ಕೇರೂರ ಗ್ರಾಮದ ರಿ.ಸ.ನಂ. 265 ಕ್ಷೇತ್ರ 04 ಎಕರೆ 14 ಗುಂಟೆ ನೇದ್ದರ ಜಮೀನು ತನ್ನ ಸ್ವಂತ ಮಾಲ್ಕೀ ವಹಿವಾಟಿನ ಜಮೀನಿರುತ್ತದೆ. ಸದರ ಆಸ್ತಿಯು ತನಗೆ ತನ್ನ ಘರಾಣ್ಯೆದ ಆಸ್ತಿಗಳನ್ನು 2009 ನೇ ಸಾಲಿನಲ್ಲಿ ಹಿಸ್ಸಾ ಮಾಡಿಕೊಂಡ ಪ್ರಕಾರ ತನ್ನ ಹಿಸ್ಸಾಕ್ಕೆ ಬಂದಿರುತ್ತದೆ. ಆ ಪ್ರಕಾರ ದಾವೇದ ಆಸ್ತಿ ಪಹಣಿ ಪತ್ರಿಕೆಯಲ್ಲಿ ತನ್ನ ಹೆಸರು ಕಾಲಂ ನಂ.9 ಮತ್ತು 12(2)ರಲ್ಲಿ ನಮೂದಾಗಿರುತ್ತದೆ. ತಾನು ವಾದಪತ್ರದ ಲಗತ್ ಹಾಜರಪಡಿಸಿದ ಹಸ್ತನಕ್ಷೆಯಲ್ಲಿ ತೋರಿಸಿದ ಪ್ರಕಾರ ತಾನು ಪಶ್ಚಿಮ ದಿಕ್ಕಿನಿಂದ 'A' ಬಿಂದುವಿನಿಂದ ಸರ್ಕಾರಿ ರಸ್ತೆ ಗುಂಟ 'B' ಬಿಂದಿವಿಗೆ ಬಂದು ದಕ್ಷಿಣ ದಿಕ್ಕಿಗೆ ಹೊರಳಿ ಗ್ರಾಮ ನಕಾಶೆಯಲ್ಲಿ ತೋರಿಸಿದ ಸರ್ಕಾರಿ ಕೆರೆಯ ಏರಿ ಅಂದರೆ ನಕ್ಷೆಯಲ್ಲಿ ತೋರಿಸಿದ 'C' ಬಿಂದುವಿಗೆ ಬಂದು ಅಲ್ಲಿಂದ 'D' ಬಿಂದಿವಿಗೆ ತಲುಪಿ ತನ್ನ ಮೇಲ್ಕಂಡ ಜಮೀನಿಗೆ ಹೋಗಿ ಬಂದು ಮಾಡುತ್ತೇನೆ ಎಂದು ಒಟ್ಟಾರೆ ತಾನು 'A' ಬಿಂದುವಿನಿಂದ 'C' ಯಿಂದ 'D' ಬಿಂದುವಿನವರೆಗೂ ಸಹ ಸರ್ಕಾರಿ ಜಮೀನಿನಲ್ಲಿಯೇ ಹೋಗಿ ಬಂದು ಮಾಡುತ್ತಿದ್ದೇನೆ ಎಂದು ತಾನು ತನ್ನ ತಂದೆ ಮತ್ತು ಪೂರ್ವಜನರ ಕಾಲದಿಂದಲೂ ಸಹ ಸದರ ಜಮೀನಿಗೆ ಎತ್ತು, ಚಕ್ಕಡಿ, ಟ್ರ್ಯಾಕ್ಟರ್ ಇತ್ಯಾದಿಗಳನ್ನು ತೆಗೆದುಕೊಂಡು ಹೋಗಿ ಬಂದು ಮಾಡುತ್ತಿದ್ದೇನೆ ಎಂದು. ಸದರಿ ದಾರಿಯನ್ನು ಹೊರತುಪಡಿಸಿ ತನಗೆ ಯಾವುದೇ ದಾರಿ ಇರುವುದಿಲ್ಲ. ಆದ್ದರಿಂದ ತನಗೆ Easement act ಪ್ರಕಾರ ಸದರ 'B & C' ರೇಖೆಗುಂಟ ಸರ್ಕಾರಿ ಕೆರೆಯ ಏರಿಯ ಪೂರ್ವದ ಅಂಚಿನಲ್ಲಿ ಬಂದು ಹೋಗಿ ಮಾಡಲು ಸಂಪೂರ್ಣ ಹಕ್ಕು ಮತ್ತು ಅಧಿಕಾರವಿರುತ್ತದೆ ಎಂದು ಪ್ರಮಾಣ ಪತ್ರದಲ್ಲಿ ಹೇಳಿರುತ್ತಾರೆ. ನಂತರ ಮುಂದುವರೆದು, ಮೇಲ್ಕಂಡತೆ, ಪ್ರತಿವಾದಿಯರು ಸದರ ದಾವೇದ ದಾರಿಯು ತಮ್ಮ ಜಮೀನಿನಲ್ಲಿ ಇರದೇಯಿದ್ದರೂ ತನ್ನ ಮುಗ್ದತೆಯನ್ನು ದುರುಪಯೋಗ ಪಡಿಸಿಕೊಂಡು ತನಗೆ ವಿನಾ ಕಾರಣ 'B & C' ರೇಖೆಗುಂಟ ಹಾದು ಹೋಗಿ 'D' ಬಿಂದುವಿನವರೆಗೆ ಹೋಗಿ ತನ್ನ ಜಮೀನನ್ನು ಸಾಗು ಮಾಡಲು ಯಾವುದೇ ಹಕ್ಕು ಅಥವಾ ಅಧಿಕಾರ ಇರುವುದಿಲ್ಲ ಹಾಗೂ ಇರಲು ಶಕ್ಯ ಸಹ ಇರುವುದಿಲ್ಲ. ಪ್ರತಿವಾದಿಯರ ಉದ್ದೇಶವೇನೆಂದರೆ ತನಗೆ ಕಿರುಕುಳ ಅಥವಾ ಅಡ್ಡಿ ಆತಂಕ ಪಡಿಸಿ ಹೆದರಿಸಿ ಸದರ ತನ್ನ ಆಸ್ತಿಯಲ್ಲಿ ಬೆಳೆ ಬೆಳೆಯದಂತೆ ಮಾಡಿ

ಆಸ್ತಿಯನ್ನು ತಮಗೆ ಕೊಟ್ಟು ಹೋಗಲಿ ಅನ್ನುವ ಹುನ್ನಾರ ಹೊಂದಿದ ಅಥವಾ ಸಂಚು ರೂಪಿಸುತ್ತಿದ್ದಾರೆ. ತನಗೆ ಈ ಮೇಲ್ಕಂಡಂತೆ 'B & C' ರೇಖೆಗುಂಟ ಸರ್ಕಾರಿ ಕೆರೆಯ ಪೂರ್ವದ ಅಂಚಿನಲ್ಲಿ ಓಡಾಡಲು ಬೇಸಾಯ ಸಲಕರಣೆ ಟ್ರ್ಯಾಕ್ಟರ್, ಎತ್ತುಗಳು ಮತ್ತು ಚಕ್ಕಡಿ ತೆಗೆದುಕೊಂಡು ಹೋಗಲು ಪ್ರತಿವಾದಿಯರ ವಿರುದ್ಧ ತನ್ನ ಸದರ ದಾವೇದ ಆಸ್ತಿಯ ಮುಖಾಂತರ ತನ್ನ ಜಮೀನಿಗೆ ಹೋಗಿ ಬಂದು ಮಾಡಲು ಅಡ್ಡಿಪಡಿಸಿದ್ದರಿಂದ ಈ ಮಾನ್ಯ ಕೋರ್ಟಿನಲ್ಲಿ ಅ.ದಾ. ನಂ.318/2021 ನೇದ್ದನ್ನು ನಿರ್ಭಂಧಕಾಜ್ಞೆ ಆದೇಶ ಕೋರಿ ದಾವೇ ಮಾಡಿ, ಸದರ ದಾವೇದಲ್ಲಿ ಮಧ್ಯಂತರ ಅರ್ಜಿಯನ್ನು ವಿಚಾರಣೆ ಮಾಡಿ ಮೇಲ್ನೋಟದ ಪ್ರಕರಣವೆಂದು ಅಭಿಪ್ರಾಯ ಪಟ್ಟು ವಜಾಗೊಳಿಸಿದ್ದು ಇರುತ್ತದೆ. ಆದರೆ ಈಗ ತಾನು ಚಿಕ್ಕೇರೂರು ಗ್ರಾಮ ಪಂಚಾಯಿತಿಗೆ ದಿನಾಂಕ: 20-09-2024 ರಂದು ಹೋಗಿ ದಾವೇದ ಆಸ್ತಿಯ ಬಗ್ಗೆ ವಿಚಾರಣೆ ಮಾಡಲಾಗಿ, ತನ್ನ ಮಾಗಣೆಗೆ ಪೂಕರವಾಗಿ ಕೆಲವು ದಾಖಲೆಗಳು ಲಭ್ಯವಾಗಿದ್ದರಿಂದ ಪುನ: ಪ್ರತಿವಾದಿಯರ ವಿರುದ್ಧ ನಿರ್ಭಂದಕಾಜ್ಞೆ ಆದೇಶ ಕೋರಿ ಈ ದಾವಾ ಮಾಡಿರುತ್ತಾರೆ. ಸದರ ದಾವೇದಲ್ಲಿ ತಾನು ತನ್ನ ಶೆಡ್ಯೂಲ್ ನಲ್ಲಿ ತೋರಿಸಿದ ಜಮೀನಿಗೆ 'B & C' ರೇಖೆಗುಂಟ ಅಂದರೆ ಸರ್ಕಾರಿ ಕೆರೆಯ ಪೂರ್ವದ ಅಂಚಿಗಿರುವ ದಾವೇದ ದಾರಿಯಲ್ಲಿ ಹೋಗಿ ಬಂದು ಮಾಡಲು ಟ್ರ್ಯಾಕ್ಟರ್, ಎತ್ತು, ಚಕ್ಕಡಿ ಮತ್ತು ಇನ್ನಿತರೆ ಬೇಸಾಯದ ಸಾಮಾನುಗಳನ್ನು ತೆಗೆದುಕೊಂಡು ಹೋಗಿ ಬಂದು ಮಾಡಲು ಪ್ರತಿವಾದಿಯರಾಗಲೀ ಅಥವಾ ಅವರ ಪರ ಯಾರೇ ಆಗಲಿ ಅಡ್ಡಿ ಆತಂಕ ಪಡಿಸದಂತೆ ದಾವೆ ನಿಖಾಲೆಯಾಗುವವರೆಗೆ ಪ್ರತಿವಾದಿಯರ ವಿರುದ್ಧ ತುರ್ತಾನು ತುರ್ತು ತಾಕೀಥಿ ಹುಕುಂ ಕೋರಿ ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ.

**3.** ಸದರಿ ಮಧ್ಯಂತರ ಅರ್ಜಿಗೆ ಪ್ರತಿವಾದಿಯರು ತಮ್ಮ ತಕರಾರು ಅರ್ಜಿಯನ್ನು ಸಲ್ಲಿಸಿಕೊಂಡಿದ್ದು, ವಾದಿಯ ದಾವೆಯು ಅಸ್ಪಷ್ಟ ಹಾಗೂ ಅಸಮಂಜಸ ಇರುತ್ತದೆ. ವಾದಿಗೆ ಸರ್ಕಾರಿ ಆಸ್ತಿಯ ಮೇಲೆ ಈಜಮೆಂಟ್ ಹಕ್ಕು ಕೇಳಲು ಕಾಯ್ದೆಯಿಂದ ಬರಲಾರದು, ವಾದಿಯು ಹಾಜರುಪಡಿಸಿದ ಹಸ್ತನಕ್ಷೆ ಸ್ಥಳದಲ್ಲಿದ್ದ ಪ್ರಕಾರ ಸರಿ ಇರದ್ದರಿಂದ ಈ ಪ್ರತಿವಾದಿಯರು ತಮ್ಮ ಪ್ರತಿವಾದಪತ್ರದ ಲಗತ್ ಒಂದು ಹಸ್ತನಕ್ಷೆಯನ್ನು ಹಾಜರುಪಡಿಸಿದ್ದು, ಅದನ್ನು ಗ್ರಾಮ ನಕಾಶದ ಪ್ರಕಾರ ತಯಾರಿಸಿದ್ದು ಇದೆ. ಈ ಪ್ರತಿವಾದಪತ್ರದ ಲಗರ್ ಹಾಜರುಪಡಿಸಿದ ನಕಾಶೆಯಲ್ಲಿ ಎ.ಬಿ.ಸಿ.ಡಿ ಅಕ್ಷರಗಳಿಂದ ತೋರಿಸಿದ ರಿ.ಸ. ನಂ. 265 ಹಾಗೂ ಡಿ.ಸಿ.ಎಫ್.ಈ ರಿ.ಸ. ನಂ.266 ಇವು ವಾದಿಯ ಜಮೀನಿಗಳು ಇರುತ್ತವೆ. ಜಿ.ಹೆಚ್.ಐ.ಜೆ. ರಿ.ಸ. ನಂ.260 ಗುತ್ತಿಕಟ್ಟೆ ಕೆರೆ ಇದ್ದು, ಈ ಕೆರೆಯ ನೀರು ಪ್ರತಿವಾದಿಯರ ಜಮೀನುಗಳಿಗೆ ಹರಿಯುತ್ತದೆ, ಸದರಿ ಕೆರೆಯ ಪೂರ್ವಕ್ಕೆ ಎಚ್.ಐ. ಒಡ್ಡು ಇದ್ದು, ಒಡ್ಡಿನ ಮೇಲ್ಭಾಗ 4-5 ಅಗಲ ಇರುತ್ತದೆ, ಎಚ್.ಐ

ಒಡ್ಡಿನಲ್ಲಿ ಈ ಪ್ರತಿವಾದಿಯರ ಜಮೀನುಗಳಿಗೆ ನೀರು ಹಾಯಲು ತುಂಬುಗಳು ಇರುತ್ತವೆ, ಎಚ್.ಐ ಏರಿಯ ಮೇಲೆ ಯಾವುದೇ ದಾರಿ ಇರುವುದಿಲ್ಲ ಹಾಗೂ ಗಿಡಮರಗಳು ಬೆಳೆದಿರುತ್ತವೆ. ಅದೇ ಪ್ರಕಾರ ರಿ.ಸ. ನಂ.260 ಕೆರೆ ಪಶ್ಚಿಮದ ಏರಿ ಜೆ.ಬಿ.ಸಿ.ಜೆ. ಗುಂಟ ಇದ್ದು ಸದರಿ ಒಡ್ಡಿನ ಮೇಲ್ಭಾಗ ಸಹ 4-5 ಫೂಟ್ ಅಗಲವಿದ್ದು, ಓಡಾಡಲು ಬರುವಂತಿಲ್ಲ. ಜೆ.ಹೆಚ್.ಐ.ಜೆ ಕೆರೆಯ ಅಂಗಲ 2 ಎಕರೆ 13 ಗುಂಟೆ ಇದ್ದು, ಮಳೆಗಾಲದಲ್ಲಿ ನೀರು ತುಂಬಿರುತ್ತದೆ. ವಾದಿಯು ಆಧರಿಸಿದ ಪ್ರಕಾರ ಎಚ್.ಐ. ಒಡ್ಡಿನ ಮೂಲಕ ಬಂದಲ್ಲಿ ಮಳೆಗಾಲದಲ್ಲಿ ಕೆರೆ ತುಂಬುವುದರಿಂದ ತನ್ನ ಹೊಲಕ್ಕೆ ಬರಲು ಸಾಧ್ಯವಿರುವುದಿಲ್ಲ. ವಾದಿಯ ಮಾಗಣಿ ಅಸ್ಪಷ್ಟ ಹಾಗೂ ಅಸಮಂಜಸ ಇರುತ್ತದೆ. ಎಚ್.ಐ ಕೆರೆ ಏರಿಯ ಪೂರ್ವಕ್ಕೆ ಪ್ರತಿವಾದಿಯರ ಜಮೀನುಗಳಿದ್ದು, ಅವರು ತಮ್ಮ ಜಮೀನುಗಳಿಗೆ ರಸ್ತೆ ಗುಂಟ ಬಂದು 'ಎಚ್' ಹತ್ತಿರ ಏರಿಯ ಕೆಳಗಡೆಯಿಂದ ತಮ್ಮ ಹೊಲಗಳಿಗೆ ಹೋಗುತ್ತಾರೆ. ವಾದಿಯು ಎಚ್.ಐ. ಏರಿಯ ಮೇಲೆ ಹೊಸದಾಗಿ ದಾರಿ ಮಾಡಿಕೊಂಡು ಒಡ್ಡು ಒಡೆದು ನಾಶಪಡಿಸಿ ಪ್ರತಿವಾದಿಯರ ಜಮೀನುಗಳಿಗೆ ನೀರು ಬರದಂತೆ ನಷ್ಟ ಮಾಡುವ ದುರಾಲೋಚನೆಯಿಂದ ಸುಳ್ಳು ಮಜಕೂರಿನ ದಾವಾ ಮಾಡಿರುತ್ತಾನೆ. ವಾದಿಯು ಆಧರಿಸಿದಂತೆ ಎಚ್.ಐ ಕೆರೆ ಏರಿಯ ಮೇಲೆ ಯಾವುದೇ ದಾರಿ ಇರುವುದಿಲ್ಲ ಹಾಗೂ ವಾದಿಯು ಎಂದೂ ಕೆರೆಯ ಏರಿಗುಂಟ ಓಡಾಡುವುದಿಲ್ಲ ಹಾಗೂ ಓಡಾಡಲು ಶಕ್ಯವಿರುವುದಿಲ್ಲ. ರಿ.ಸ. ನಂ.260 ರ ಕೆರೆಯ ಅಂಗಳದಲ್ಲಿ ನೀರು ತುಂಬಿರುವುದರಿಂದ ಅಲ್ಲಿ ಓಡಾಡಲು ಎತ್ತು, ಚಕ್ಕಡಿ, ಟ್ರ್ಯಾಕ್ಟರ್ ತೆಗೆದುಕೊಂಡು ಓಡಾಡಲು ಬರಲಾರದು. ಒಂದು ಪಕ್ಷ ವಾದಿಯು ರಸ್ತೆಗುಂಟ ಬಂದು 260 ರ ಕೆರೆಯ ಮುಖಾಂತರ ತನ್ನ ಜಮೀನಿಗೆ ಬರುತ್ತಾನೆ ಎಂದು ಪ್ರತಿಪಾದಿಸಿದಲ್ಲಿ ಕೆರೆಯ ಪಶ್ಚಿಮ ದಿಕ್ಕಿನ ಗುಂಟ ಏರಿ ಜೆ.ಬಿ.ಸಿ.ಜೆ ಗುಂಟ ಬರಲು ಅವಕಾಶವಿದ್ದರೂ ಸಹ ಅಲ್ಲಿ ಹಕ್ಕು ಕೇಳಿಲ್ಲ. ಆದರೆ ಜೆ.ಬಿ.ಸಿ.ಜೆ. ಕೆರೆ ಒಡ್ಡಿನ ಮೇಲೆ ದಾರಿ ಹಕ್ಕು ಕೇಳದೇ ಎಚ್.ಐ ಕೆರೆ ಏರಿಯ ಮೇಲೆ ಕೇಳಿದ್ದು ದುರುದ್ದೇಶದಿಂದ ಕೂಡಿದ್ದು ಇರುತ್ತದೆ. ವಾದಿಯು ಈ ಪ್ರತಿವಾದಿಯರಿಗೆ ಬರುವ ಕೆರೆಯ ನೀರು ಬಾರದಂತೆ ಮಾಡಲು ಎಚ್.ಐ ಗುಂಟ ದಾರಿ ಇದೆ ಎಂದು ಸುಳ್ಳು ಸಾಧಿಸಿದ್ದು ಇರುತ್ತದೆ. ಈ ಪ್ರತಿವಾದಪತ್ರದ ಲಗತ್ ಹಾಜರುಪಡಿಸಿದ ಹಸ್ತನಕ್ಷೆಯಲ್ಲಿ ಪಶ್ಚಿಮ ಭಾಗದ ಕಡೆ ರಿ.ಸ. ನಂ.271 ಕುಂತಿಗುಡ್ಡ ಇರುತ್ತದೆ. ಅದಕ್ಕೆ ಹೊಂದಿ ಪೂರ್ವಕ್ಕೆ ರಿ.ಸ. ನಂ.269 ಇರುತ್ತದೆ. ಎಲ್.ಈ.ಎಫ್ ಇದು ಮಲ್ಲೇನಹಳ್ಳಿ ಗ್ರಾಮದ ಗಡಿ ದಾರಿ ಇರುತ್ತದೆ. ವಾದಿ ಹಾಗೂ ಹಿರಿಯರು ತಮ್ಮ ಜಮೀನುಗಳಿಗೆ ಕೆ.ಎಲ್. ಕುಂತಿಗುಡ್ಡದ ಮೂಲಕ ಬಂದು ಎಲ್.ಈ.ಎಫ್. ಗಡಿ ದಾರಿಗುಂಟ ತಮ್ಮ ಹೊಲಕ್ಕೆ ಓಡಾಡುತ್ತಾ ಬಂದಿರುತ್ತಾರೆ. ಆ ಪ್ರಕಾರ ಓಡಾಡಲು ಅವರಿಗೆ ಯಾವುದೇ ತರಹದ ಅಡೆತಡೆ ಇರುವುದಿಲ್ಲ. ಈ ಎಲ್ಲಾ ವಿಷಯ ಮುಚ್ಚಿ ಹಾಕಿ ರಿ.ಸ. ನಂ. 260 ರ ಕೆರೆಯ ಪೂರ್ವದ ಏರಿ ನಾಶ ಮಾಡುವ ದುರುದ್ದೇಶದಿಂದ ಅಲ್ಲಿ ದಾರಿ ಇದೆ ಎಂದು ಸುಳ್ಳು ಮಜಕೂರಿನ ದಾವಾ

ಮಾಡಿರುತ್ತಾರೆ ಮತ್ತು ಇದೂ ಅಲ್ಲದೇ ವಾದಿಯು ನೀರಾವರಿ ಇಲಾಖೆಯವರನ್ನು ಪಾರ್ಟಿ ಮಾಡದೇ ಈ ದಾವೆಯು ನಡೆಯಲಾರದು ಮತ್ತು ವಾದಿಗೆ ದಾರಿ ಹಕ್ಕಿನ ಬಗ್ಗೆ ನಿರ್ಣಯಾತ್ಮಕ ದಾವಾ ಮಾಡದೇ ಕೇವಲ ತಾಕೀಥಿ ಬಗ್ಗೆ ದಾವಾ ಮಾಡಲು ಬರಲಾರದು. ವಾದಿಯು ಈ ಪ್ರತಿವಾದಿಯರ ವಿರುದ್ಧ ಸದರಿ ದಾರಿ ವಹಿವಾಟಿಗೆ ಸಂಬಂಧಿಸಿದಂತೆ ತಾಕೀಥಿ ಹುಕುಂ ಕೋರಿ ಮಾನ್ಯ ಸಿವಿಲ್ ಜಡ್ಜ್ ಹಿರೇಕೆರೂರ ಇವರ ನ್ಯಾಯಾಲಯದಲ್ಲಿ ಓ.ಎಸ್. ನಂ. 318/2021 ನೇದ್ದನ್ನು ಸಲ್ಲಿಸಿದ್ದು ಅಲ್ಲದೇ ಸದರಿ ದಾವೆದಲ್ಲಿ ಮಧ್ಯಂತರ ಅರ್ಜಿ ನಂ.1 ನೇದ್ದನ್ನು ಸಲ್ಲಿಸಿ ತಾಕೀಥಿ ಹುಕುಂ ಕೋರಿದ್ದು ಇತ್ತು. ಪ್ರತಿವಾದಿಯರು ಸದರಿ ದಾವಾದಲ್ಲಿ ಪ್ರತಿವಾದ ಪತ್ರ ಹಾಗೂ ಮಧ್ಯಂತರ ಅರ್ಜಿಗೆ ತಕರಾರು ಸಲ್ಲಿಸಿದ್ದು ಅದು ವಿಚಾರಣೆಯಾಗಿ ಮಧ್ಯಂತರ ಅರ್ಜಿಯು ವಜಾ ಆಗಿರುತ್ತದೆ. ತದನಂತರ ವಾದಿಯು ಎಂ.ಎ. ನಂ.3/2022 ನೇದ್ದನ್ನು ಸಲ್ಲಿಸಿದ್ದು, ಅದು ಸಹಿತ ವಿಚಾರಣೆಯಾಗಿ ವಜಾಗೊಂಡಿರುತ್ತದೆ. ತದನಂತರ ವಾದಿಯು ಮಾನ್ಯ ಉಚ್ಚ ನ್ಯಾಯಾಲಯ, ಧಾರವಾಡ ಇವರ ನ್ಯಾಯಾಲಯದಲ್ಲಿ ಡಬ್ಲ್ಯೂಪಿ. ನಂ. 104678/2023 ನೇದ್ದನ್ನು ಸಲ್ಲಿಸಿದ್ದು, ಅದು ವಿಚಾರಣೆಯಾಗಿ ವಜಾಗೊಂಡಿರುತ್ತದೆ. ಈ ಎಲ್ಲಾ ಅರ್ಜಿಗಳು ವಜಾಗೊಂಡಿದ್ದರೂ ಸಹಿತ ಸದರಿ ವಿಷಯಗಳನ್ನು ಮುಚ್ಚಿಟ್ಟು (suppression of material facts) ವಾದಿಯು ಸುಳ್ಳು ಸಂಗತಿಗಳನ್ನು ಆಧರಿಸಿ ಪುನ: ಓ.ಎಸ್. ನಂ.20/2025 ನೇದ್ದನ್ನು ದಾಖಲಿಸಿ ಅದರಲ್ಲಿ ತಾತ್ಕಾಲಿಕ ತಾಕೀಥಿ ಹುಕುಂ ಪಡೆದುಕೊಂಡಿದ್ದು. ಕಾರಣ ವಾದಿಯ ದಾವೆಕ್ಕೆ Res-Judicata ತತ್ವದ ಭಾದೆ ಇರುತ್ತದೆ ಹಾಗೂ ಪ್ರಸ್ತುತ ದಾವೆಯು ಮೇಲ್ನೋಟಕ್ಕೆ ಕಿತ್ತು ಹಾಕಲು ಯೋಗ್ಯ ಇರುವುದರಿಂದ ಪ್ರಸ್ತುತ ದಾವೆಯನ್ನು ಮಧ್ಯಂತರ ಅರ್ಜಿಯನ್ನು ಖರ್ಚು ಸಹಿತ ವಜಾಗೊಳಿಸಬೇಕೆಂದು ಕೇಳಿಕೊಂಡಿರುತ್ತಾರೆ.

**4.** ವಾದಿ ಮತ್ತು ಪ್ರತಿವಾದಿ ಪರ ವಕೀಲರ ವಾದಮಂಡನೆಯನ್ನು ಆಲಿಸಲಾಯಿತು, ಲಭ್ಯವಿರುವ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು.

**5.** ಈ ಕೆಳಕಂಡ ಅಂಶಗಳು ನನ್ನ ಪರಿಗಣನೆಗೆ ಉದ್ಭವಿಸಿರುತ್ತವೆ:

1. ವಾದಿಯು ಮೇಲ್ನೋಟದ ದಾವೆಯನ್ನು ಹೊಂದಿರುತ್ತಾನೆ ಎಂಬುದನ್ನು ರುಜುವಾತು ಪಡಿಸುತ್ತಾರೆಯೇ ?

2. ಅನುಕೂಲತೆಯ ಸಮಾನತೆಯ ಒಲವು ವಾದಿಯ ಪರವಾಗಿ ವಾಲುತ್ತದೆಯೇ ?

3. ಒಂದೊಮ್ಮೆ ಈ ಅರ್ಜಿಯನ್ನು ಪುರಸ್ಕರಿಸದಿದ್ದಲ್ಲಿ ವಾದಿಗೆ ತುಂಬಲಾರದ ನಷ್ಟವುಂಟಾಗುತ್ತದೆಯೇ ?

4. ಏನು ಆದೇಶ ?

**6.** ಮೇಲ್ಕಂಡ ಅಂಶಗಳಿಗೆ ನನ್ನ ಉತ್ತರಗಳು ಈ ಕೆಳಗಿನಂತಿವೆಃ

ಅಂಶಃ-1 ರಿಂದ 3 ಃ ನಕಾರಾತ್ಮಕವಾಗಿ,
ಅಂಶಃ-4 ಃ ಅಂತಿಮ ಆದೇಶದಂತೆ
ಈ ಕೆಳಕಂಡ ಕಾರಣಗಳಿಗಾಗಿಃ

## ಕಾರಣಗಳು

**7. ಅಂಶ-1 ರಿಂದ 3:-** ಸದರಿ ಅಂಶಗಳು ಒಂದಕ್ಕೊಂದು ಪೂರಕವಾಗಿರುವ ಕಾರಣದಿಂದ, ಪುನರಾವರ್ತನೆಯನ್ನು ಹೊಗಲಾಡಿಸುವ ಸಲುವಾಗಿ ಈ ಎಲ್ಲಾ ಅಂಶಗಳನ್ನು ಒಟ್ಟಿಗೆ ತೆಗೆದುಕೊಳ್ಳಲಾಗಿರುತ್ತದೆ.

ವಾದಿಯು ಅರ್ಜಿಯ ಜೊತೆಗೆ ಸಲ್ಲಿಸಿದ ಪ್ರಮಾಣ ಪತ್ರ ಹಾಗೂ ಹಾಜರುಪಡಿಸಿದಂತಹ ಎಲ್ಲಾ ದಾಖಲೆಗಳನ್ನು ಪ್ಲೀಡಿಂಗ್ಸ್ ನ್ನು ಗಮನಿಸಿದಾಗ, ವಾದಿಯ ನಿಖರವಾದ ದಾವೇನೆಂದರೆ, ವಾದಿಯು ಹಾವೇರಿ ಜಿಲ್ಲೆ, ಹಿರೇಕೆರೂರು ತಾಲೂಕು, ಹಂಸಭಾವಿ ಹೋಬಳಿ ಚಿಕ್ಕೇರೂರ ಗ್ರಾಮದ ರಿ.ಸ.ನಂ. 265 ವಿಸ್ತೀರ್ಣ 04 ಎಕರೆ 14 ಗುಂಟೆ ಜಮೀನಿನ ಮಾಲೀಕ ಹಾಗೂ ವಹಿವಾಟುದಾರನಾಗಿರುತ್ತಾನೆ. ಸದರಿ ಆಸ್ತಿಗೆ ಹೋಗಲು ಸದರಿ ಆಸ್ತಿಯ ಪಶ್ಚಿಮ ದಿಕ್ಕಿನಿಂದ 'A’ ಬಿಂದುವಿನಿಂದ ಸರ್ಕಾರಿ ರಸ್ತೆ ಗುಂಟ 'B’ ಬಿಂದಿವಿಗೆ ಹೋಗಿ ದಕ್ಷಿಣ ದಿಕ್ಕಿಗೆ ಹೊರಳಿ 'C’ ಬಿಂದುವಿಗೆ ಬಂದು ಅಲ್ಲಿಂದ 'D’ ಬಿಂದಿವಿಗೆ ತಲುಪಿ ತನ್ನ ಜಮೀನಿಗೆ ಹೋಗಬೇಕಾಗಿರುತ್ತದೆ. ಅಂದರೆ ವಾದಿಯು 'A’ ಬಿಂದುವಿನಿಂದ ‘C’ ಯಿಂದ ‘D’ ಬಿಂದುವಿನವರೆಗೂ ಸರ್ಕಾರಿ ಜಮೀನಿನಲ್ಲಿಯೇ ಹೋಗಿ ಬಂದು ಮಾಡುತ್ತಿರುತ್ತಾನೆ. ಆ ರೀತಿ ಸದರಿ ‘B & C’ ರೇಖೆಗುಂಟ ದಾರಿಯಲ್ಲಿಯೇ ಮೂಲಕವೇ ವಾದಿ ತನ್ನ ಆಸ್ತಿಗೆ ಹೋಗಿ ಬರುವುದು ಎತ್ತು, ಚಕ್ಕಡಿ, ಟ್ರ್ಯಾಕ್ಟರ್ ಇತ್ಯಾದಿಗಳನ್ನು ತೆಗೆದುಕೊಂಡು ಹೋಗಿ ಬಂದು ತನ್ನ ಪೂರ್ವಜರ ಕಾಲದಿಂದಲೂ ಮಾಡುತ್ತಿರುತ್ತಾರೆ. ಆದರೆ ಪ್ರತಿವಾದಿಯರು ಸದರಿ ದಾವಾ ದಾರಿಯ ಮೇಲೆ ಯಾವುದೇ ಹಕ್ಕು ಇಲ್ಲದಿದ್ದರೂ ವಾದಿಯ ಮುಗ್ಧತೆಯನ್ನು ದುರುಪಯೋಗ ಪಡಿಸಿಕೊಂಡು ವಿನಾ ಕಾರಣ ‘B & C’ ರೇಖೆಗುಂಟ ಹಾದು ಹೋಗಿ 'D’ ಬಿಂದುವಿನವರೆಗೆ ಹೋಗಿ ತನ್ನ ಜಮೀನನ್ನು ಸಾಗುವಳಿ ಮಾಡಲು ಪ್ರತಿವಾದಿಯರು ತೊಂದರೆಯನ್ನು ಉಂಟು ಮಾಡುತ್ತಿರುತ್ತಾರೆ ಹಾಗೂ ಪ್ರತಿವಾದಿಯರು ವಾದಿಯು

ಓಡಾಡುವ ದಾರಿಯಲ್ಲಿ ಬಂದು ಮಾಡಲು ಪ್ರಯತ್ನಿಸಿದ್ದು, ಆ ರೀತಿ ಯಾವುದೇ ಹಕ್ಕು ಅವರಿಗೆ ಅಧಿಕಾರ ಇರುವುದಿಲ್ಲ. ಮುಂದುವರೆದು ವಾದಿಯ ದಾವೆ ಏನೆಂದರೆ ಪ್ರತಿವಾದಿಯರು ಉದ್ದೇಶಪೂರ್ವಕವಾಗಿ ವಾದಿಗೆ ಕಿರುಕುಳ ನೀಡುವಸಲುವಾಗಿ ಆತನನ್ನು ಆತಂಕ ಪಡಿಸಿ ಹೆದರಿಸಿ ತನ್ನ ಆಸ್ತಿಯಲ್ಲಿ ಬೆಳೆ ಬೆಳೆಯದಂತೆ ಮಾಡಿ ಆಸ್ತಿಯನ್ನು ತಮಗೆ ಕೊಟ್ಟು ಹೋಗಲಿ ಅನ್ನುವ ಹುನ್ನಾರ ಹೊಂದಿದ ಅಥವಾ ಸಂಚು ರೂಪಿಸುತ್ತಿದ್ದಾರೆ. ಆದುದರಿಂದ ವಾದಿಗೆ 'B & C' ರೇಖೆಗುಂಟ ಸರ್ಕಾರಿ ಕೆರೆಯ ಪೂರ್ವದ ಅಂಚಿನಲ್ಲಿ ಓಡಾಡಲು ಬೇಸಾಯ ಸಲಕರಣೆ ಟ್ರ್ಯಾಕ್ಟರ್, ಎತ್ತುಗಳು ಮತ್ತು ಚಕ್ಕಡಿ ತೆಗೆದುಕೊಂಡು ಹೋಗಲು ಪ್ರತಿವಾದಿಯರು ದಿನಾಂಕ: 20-09-2024 ರಂದು ಅಡ್ಡಿಪಡಿಸಿದ್ದು, ಇದಕ್ಕೂ ಪೂರ್ವದಲ್ಲಿಯೂ ಕೂಡ ಪ್ರತಿವಾದಿಯರು ಇದೇ ರೀತಿ ಅಡ್ಡಿಪಡಿಸಿದ್ದು, ವಾದಿಯು ಪ್ರತಿವಾದಿಯರ ವಿರುದ್ದ ಅ.ದಾ. ನಂ.318/2021 ರಲ್ಲಿ ದಾವೆಯನ್ನು ಹೂಡಿ ನಿರ್ಭಂಧಕಾಜ್ಞೆ ಆದೇಶ ಕೋರಿ ದಾವೇ ಮಾಡಿದ್ದು, ಆದರೆ ಸದರಿ ಅರ್ಜಿ ವಜಾಗೊಂಡಿದಾಗಿ, ನಂತರ ವಾದಿ ಹಲವು ದಾಖಲೆಗಳನ್ನು ಪಡೆದುಕೊಂಡು ದಾವಾಸ್ತಿಯ ಬಗ್ಗೆ ವಿಚಾರಣೆ ಮಾಡಿ, ದಾವಾಸ್ತಿಯ ಬಗ್ಗೆ ದಾಖಲೆಗಳು ಲಭ್ಯವಿದಿದ್ದರಿಂದ ಪುನ: ಪ್ರತಿವಾದಿಯರ ವಿರುದ್ದ ನಿರ್ಭಂದಕಾಜ್ಞೆ ಆದೇಶ ಕೋರಿ ಈ ದಾವೆ ಮಾಡಿರುತ್ತಾರೆ. ಮುಂದುವರೆದು, ವಾದಿ ಪರ ವಕೀಲರು ಮಂಡಿಸಿದ ವಾದವೆನೆಂದರೆ, ವಾದಿಯ ಪರವಾಗಿ ಮೇಲ್ನೋಟಕ್ಕೆ ದಾವೆ ಇದಿದ್ದು, ಒಂದು ವೇಳೆ ವಾದಿಯು ಕೇಳಿದಂತೆ ನಿರ್ಭಂಧಕಾಜ್ಞೆ ಆದೇಶವನ್ನು ಹೊರಡಿಸದೇ ಹೋದರೆ, ವಾದಿಗೆ ತುಂಬಲಾರದ ನಷ್ಟ ಉಂಟಾಗುತ್ತದೆ. ಆದುದರಿಂದ, ವಾದಿಯ ಪರವಾಗಿ ಹಾಗೂ ಪ್ರತಿವಾದಿಯರ ವಿರುದ್ದವಾಗಿ ನಿರ್ಭಂಧಕಾಜ್ಞೆ ಆದೇಶವನ್ನು ಹೊರಡಿಸಬೇಕಾಗಿ ಕೋರಿಕೊಂಡಿರುತ್ತಾರೆ.

**8.** ತಮ್ಮ ವಾದಕ್ಕೆ ಪೂರಕವಾಗಿ ವಾದಿ ಪರ ವಕೀಲರು ಕೆಲವು ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳೆಂದರೆ, ಚಿಕ್ಕೇರೂರು ಗ್ರಾಮ ಪಂಚಾಯಿತ ಕಾರ್ಯಾಲಯ ರವರು ಬರೆದುಕೊಟ್ಟ ಕಛೇರಿ ಆದೇಶದ ದೃಢೀಕೃತ ನಕಲು ಪ್ರತಿ. ಸದರಿ ದಾಖಲೆಯನ್ನು ಕೂಲಂಕುಶವಾಗಿ ಪರಿಶೀಲಿಸಿದಾಗ, ಪಂಚಾಯಿ ಅಭಿವೃದ್ದಿ ಅಧಿಕಾರಿ, ಚಿಕ್ಕೇರೂರು ಗ್ರಾಮ ಪಂಚಾಯಿತಿ ರವರು ಒಂದು ಕಛೇರಿ ಆದೇಶವನ್ನು ಹೊರಡಿಸಿದ್ದು, ಅದೇನೆಂದರೆ, ರಿ.ಸ. ನಂ. 260 ಕ್ಷೇತ್ರ 2 ಎಕರೆ 13 ಗುಂಟೆ ಚಿಕ್ಕೇರೂರು ಗ್ರಾಮ ಖರಾಬ ಗುತ್ತಿಕಟ್ಟಿ ಇದ್ದು, ಅದು ಸದರಿ ಚಿಕ್ಕೇರೂರು ಗ್ರಾಮ ಪಂಚಾಯತಿಗೆ ಒಳಪಟ್ಟಿದ್ದು, ಅದರ ಸಂಪೂರ್ಣ ಜವಬ್ದಾರಿ ಚಿಕ್ಕೇರೂರು ಗ್ರಾಮ ಪಂಚಾಯತಿಗೆ ಇರುತ್ತದೆ ಹಾಗೂ ಕರ್ನಾಟಕ ರಸ್ತೆ ಅಭಿವೃದ್ದಿ ನಿಗಮ ನಿಯಮಿತ, ಬೆಂಗಳೂರು ಇವರ MR/H21/2018-19 dtd:

07-12-2018 ಆದೇಶದ ಪ್ರಕಾರ ರಸ್ತೆಯ ಏರಿಯ ಮೇಲೆ ರೈತರು ತಮ್ಮ ಜಮೀನಿಗೆ ಓಡಾಡಲಿಕ್ಕೆ, ಸದರಿ ಕೆರೆಯ ಅಜು ಬಾಜು ಇರುವ ರೈತರು ತಂಟೆ ತಕರಾರು ಮಾಡುವ ಹಕ್ಕು ಯಾರಿಗೂ ಇರುವುದಿಲ್ಲ ಎಂದು ಆದೇಶಿಸಲಾಗಿರುತ್ತದೆ. ನಂತರ ವಾದಿ ಪರ ವಕೀಲರು ರಿ.ಸ.ನಂ. 260 ರ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು, ಸದರಿ ಆರ್.ಟಿ.ಸಿ.ಯನ್ನು ಕೂಲಂಕುಶವಾಗಿ ಪರಿಶೀಲಿಸಿದಾಗ, ಕಾಲಂ ನಂ. 9 ಮತ್ತು 10 ರಲ್ಲಿ 2 ಎಕರೆ 12 ಗುಂಟೆ .08 ಆಸ್ತಿ ಖರಾಬು ಗುತ್ತಿಕಟ್ಟೆಯಲ್ಲಿದ್ದು, 08.00 ಗುಂಟೆ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು ಇವರ ಹೆಸರಿನಲ್ಲಿ ಇರುವುದಾಗಿ ಕಂಡುಬಂದಿರುತ್ತದೆ. ನಂತರ ರಿ.ಸ.ನಂ. 260 ರ ಆರ್.ಟಿ.ಸಿ.ಯ ದೃಢೀಕೃತ ನಕಲು ಪ್ರತಿಯನ್ನು ಹಾಜರುಪಡಿಸಿದ್ದು, ಸದರಿ ದಾಖಲೆಯನ್ನು ಕೂಲಂಕುಶವಾಗಿ ಪರಿಶೀಲಿಸಿದಾಗ, ಸದರಿ ದಾಖಲೆಯ ಕಾಲಂ ನಂ.9 ರಲ್ಲಿ ಸದರಿ ಜಾಗ ಖರಾಬ ಗುತ್ತಿಕಟ್ಟೆಗೆ ಸೇರಿರುತ್ತದೆ ಎಂದು ನಮೂದಾಗಿರುತ್ತದೆ.

**9.** ಮತ್ತೊಂದು ಕಡೆ ಪ್ರತಿವಾದಿಯರ ಪರ ವಕೀಲರು ತಮ್ಮ ಪ್ರತಿವಾದ ಪತ್ರದಂತೆ ವಾದ ಮಂಡಿಸಿದ್ದು, ಮುಂದುವರೆದು ಮಂಡಿಸಿದ ವಾದವೇನೆಂದರೆ, ವಾದಿಗೆ ದಾವಾ ದಾರಿ 'B & C' ಮೇಲೆ ಯಾವುದೇ ಹಕ್ಕು ಹಿತಾಸಕ್ತಿ ಇರುವುದಿಲ್ಲ ಹಾಗೂ ವಾದಿ ನ್ಯಾಯಾಲಯಕ್ಕೆ ಶುದ್ದ ಹಸ್ತದಿಂದ ಬಂದಿರುವುದಿಲ್ಲ ಹಾಗೂ ವಾದಿಯ ಹೂಡಿರುವಂತಹ ದಾವೆ ಊರ್ಜಿತವಾಗುವುದಿಲ್ಲ, ಏಕೆಂದರೆ ಈ ದಾವೆಯ ವಸ್ತುಸ್ಥಿತಿ ಹಾಗೂ ಪಕ್ಷಗಾರರು ದಾವೆಯಲ್ಲಿ ಹೂಡಿದ್ದು, ತದನಂತರ ಅದೇ ವಿವಾದಾಂಶದ ಮೇಲೆ ಪಕ್ಷಗಾರರ ವಿರುದ್ದ ಇದೇ ನ್ಯಾಯಾಲಯದಲ್ಲಿ ದಾವೆಯನ್ನು ಹೂಡಿರುವುದು Res-judicata ದ ಬಾದಾ ಇರುತ್ತದೆ. ನಂತರ ಮುಂದುವರೆದು ಹೇಳಿದ ಅಂಶಗಳೆನೆಂದರೆ, ವಾದಿಯು ಹೇಳಿರುವ ದಾರಿಯ ಮೂಲಕ ಟ್ರ್ಯಾಕ್ಟರ್, ಚಕ್ಕಡಿ ಹಾಗೂ ಇತರೇ ಭಾರಿ ಗಾತ್ರದ ವಾಹನಗಳನ್ನು ಓಡಾಡಲು ಬಿಟ್ಟರೆ, ಸದರಿ ದಾರಿಯ ಪಕ್ಕದಲ್ಲಿ ಆಸ್ತಿಗಳನ್ನು ಹೊಂದಿರುವಂತಹ ಪ್ರತಿವಾದಿಯರಿಗೆ ತುಂಬಲಾರದ ನಷ್ಟ ಉಂಟಾಗುತ್ತದೆ. ಸದರಿ ದಾರಿ ಟ್ರ್ಯಾಕ್ಟರ್, ಚಕ್ಕಡಿ ಹಾಗೂ ಎತ್ತಿನಗಾಡಿಗಳಿಗೆ ಓಡಾಡಲು ಸೂಕ್ತವಾದ ದಾರಿಯಾಗಿರುವುದಿಲ್ಲ. ಅದು ಕೇವಲ ಕೆರೆಯ ಒಡ್ಡು 2.5 ಅಡ್ಡಿ ಅಗಲ ಇರುತ್ತದೆ. ಸದರಿ ಒಡ್ಡಿನ ಮೇಲೆ ಸಹ 4-5 ಫೂಟ್ ಅಗಲವಿದ್ದು ಓಡಾಡಲು ಬರುವುದಿಲ್ಲ. ಕೆರೆಯ ಅಂಗಳ 2 ಎಕರೆ 13 ಗುಂಟೆ ಇದ್ದು, ಮಳೆಗಾಲದಲ್ಲಿ ನೀರು ತುಂಬುತ್ತದೆ. ವಾದಿಯು ಆಧರಿಸಿದ ಪ್ರಕಾರ ಸದರಿ ಒಡ್ಡಿನ ಮೇಲೆ ರಸ್ತೆ ಮಾಡಲು ಬಿಟ್ಟರೆ, ಪ್ರತಿವಾದಿಯರಿಗೆ ಸದರಿ ಕೆರೆಯಿಂದ ತಮ್ಮ ತೋಟಗಳಿಗೆ ನೀರು ಹಾಯಿಸಲು ತೊಂದರೆ ಆಗುತ್ತದೆ. ಅದಲ್ಲದೇ, ವಾದಿಗೆ ತನ್ನ ಜಮೀನಿಗೆ ಹೋಗಲು ಮತ್ತೊಂದು ಕಡೆಯಿಂದ ಹೋಗಲು ದಾರಿ ಇರುತ್ತದೆ. ಸದರಿ ವಿಚಾರವನ್ನು ನ್ಯಾಯಾಲಯದ ಮುಂದೆ ಮರೆಮಾಚಿ ವಾದಿ

ಈ ದಾವೆಯನ್ನು ಪ್ರತಿವಾದಿಯರಿಗೆ ಕಿರುಕುಳ ನೀಡುವ ಸಲುವಾಗಿ ಹೂಡಿರುತ್ತಾರೆ. ನಂತರ ಮುಂದುವರೆದು, ಪ್ರತಿವಾದಿಯರ ಪರ ವಕೀಲರು ಮಂಡಿಸಿದ ವಾದವೇನೆಂದರೆ ವಾದಿಯು ಪ್ರತಿವಾದಿಯರ ವಿರುದ್ಧ ವಿವಾದಿತ ದಾರಿಯ ವಹಿವಾಟಿಗೆ ಸಂಭಂದಿಸಿದಂತೆ ನಿರ್ಭಂಧಕಾಜ್ಞೆಯನ್ನು ಕೋರಿ ಇದೇ ನ್ಯಾಯಾಲಯದಲ್ಲಿ ಒ.ಎಸ್. ನಂ. 318/2021 ರಂತೆ ದಾವೆಯನ್ನು ದಾಖಲಿಸಿದ್ದು, ಅದರಲ್ಲಿ ಮಧ್ಯಂತರ ಅರ್ಜಿಯನ್ನು ಕೋರಿ ಸಲ್ಲಿಸಿದ ಅರ್ಜಿಯನ್ನು ನ್ಯಾಯಾಲಯ ವಜಾಗೊಳಿಸಿರುವುದಾಗಿ, ನಂತರ ಸದರಿ ಆದೇಶವನ್ನು ಪ್ರಶ್ನಿಸಿ ವಾದಿ ಎಂ.ಎ. ನಂ.3/2022 ರಂತೆ ಮೇಲ್ಮನವಿ ಮಾಡಿದ್ದು, ಸದರಿ ಮೇಲ್ಮನವಿ ಕೂಡ ವಿಚಾರಣೆಯಾಗಿ ವಜಾಗೊಂಡಿರುತ್ತದೆ. ನಂತರ ವಾದಿ ಮಾನ್ಯ ಉಚ್ಚ ನ್ಯಾಯಾಲಯ, ಧಾರವಾಡ ಇವರ ನ್ಯಾಯಾಲಯದಲ್ಲಿ ಡಬ್ಲ್ಯೂಪಿ. ನಂ. 104678/2023 ರನ್ನು ಸಲ್ಲಿಸಿದ್ದು, ನಂತರ ಸದರಿ ಅರ್ಜಿ ಕೂಡಾ ವಜಾಗೊಂಡಿರುವುದಾಗಿ, ಆ ರೀತಿ ವಜಾಗೊಂಡಿರುವಂತಹ ಎಲ್ಲಾ ಅಂಶಗಳನ್ನು ಮುಚ್ಚಿಟ್ಟು ವಾದಿಯು ಸುಳ್ಳು ಸಂಗತಿಗಳನ್ನು ಆಧರಿಸಿ ಈ ದಾವೆಯನ್ನು ಹೂಡಿರುತ್ತಾರೆ. ಆದುದ್ದರಿಂದ, ವಾದಿಯು ತಾನು ಕೇಳಿದ ಪರಿಹಾರವನ್ನು ಪಡೆದುಕೊಳ್ಳಲು ಅರ್ಹನಾಗತಕ್ಕದ್ದಲ್ಲ ಎಂದು ವಾದ ಮಂಡಿಸಿರುತ್ತಾರೆ. ನಂತರ ಮುಂದುವರದು ಪ್ರತಿವಾದಿಯರ ಪರ ವಕೀಲರು ವಾದಿಯ ಪರವಾಗಿ ಸಾಬೀತಾಗುವ ಯಾವುದೇ ದಾವೆ ಇರುವುದಿಲ್ಲ, ಒಂದು ವೇಳೆ ಅರ್ಜಿಯನ್ನು ತಿರಸ್ಕರಿಸಿದರೆ ವಾದಿಗೆ ಯಾವುದೇ ತೊಂದರೆ ಆಗುವುದಿಲ್ಲ, ಅದೇ ನ್ಯಾಯಾಲಯವು ಸದರಿ ಅರ್ಜಿಯನ್ನು ಪುರಸ್ಕರಿಸಿದರೆ ರಸ್ತೆಯ ಮೇಲೆ ಟ್ರ್ಯಾಕ್ಟರ್, ಚಕ್ಕಡಿಗಳನ್ನು ಹೊಡೆದುಕೊಂಡು ಹೋದರೆ ಸದರಿ ಕೆರೆಯ ಕಟ್ಟೆ ಕುಸಿದು ಸದರಿ ಕೆರೆಯ ಕಟ್ಟೆಯ ಕೆಳಗೆ ಇರುವ ಪ್ರತಿವಾದಿಯರ ಜಮೀನುಗಳಿಗೆ ನೀರು ಹಾದು ನಾಶಗೊಳುವ ಸಂಭವವಿರುತ್ತದೆ. ಆದ್ದುದರಿಂದ, ವಾದಿಯು ಕೇಳಿರುವಂತಹ ಪ್ರಾರ್ಥನೆಯನ್ನು ಮನ್ನಿಸಿ ಅವರು ಕೇಳಿದ ಪರಿಹಾರವನ್ನು ಕೊಡಬಾರದು ಎಂದು ವಾದ ಮಂಡಿಸಿರುತ್ತಾರೆ.

**10.** ಅವರ ವಾದ-ವಿವಾದಗಳಿಗೆ ಪೂರಕವಾಗಿ ಪ್ರತಿವಾದಿ ಪರ ವಕೀಲರು ಹಲವು ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳೆಂದರೆ, ಒ.ಎಸ್. ನಂ. 318/2021 ರಲ್ಲಿ ವಾದಿಯು ಸಲ್ಲಿಸಿದಂತಹ ಅರ್ಜಿ ನಂ.1 ರ ಮೇಲೆ ಆದೇಶದ ದೃಢೀಕೃತ ನಕಲು ಹಾಗೂ ಎಂ.ಎ. ನಂ. 3/2022 ರ ಆದೇಶದ ದೃಢೀಕೃತ ನಕಲು ಪ್ರತಿ ಹಾಗೂ ರಿಟ್ ಪಿಟೀಶನ್ ನಂ. 104678/2023 ರ ಮಾನ್ಯ ಉಚ್ಚ ನ್ಯಾಯಾಲಯ ಹೊರಡಿಸಿದಂತಹ ಆದೇಶದ ದೃಢೀಕೃತ ನಕಲು ಪ್ರತಿ. ಹಾಗೂ ನಕಲು ಗ್ರಾಮ ನಕ್ಷೆಯನ್ನು ಹಾಜರುಪಡಿಸಿರುತ್ತಾರೆ.

**11.** ವಾದಿ ಮತ್ತು ಪ್ರತಿವಾದಿಯರ ವಾದವಿವಾದಗಳನ್ನು ಹಾಗೂ ಪ್ಲೀಡಿಂಗ್ ಗಳನ್ನು ಮತ್ತು ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, ವಾದಿಯು ರಿ.ಸ.ನಂ. 265 ಚಿಕ್ಕೇರೂರು ಗ್ರಾಮದ ಮಾಲೀಕನಲ್ಲ ಎಂಬುದರ ಬಗ್ಗೆ ಯಾವುದೇ ವಿವಾಧವಿರುವುದಿಲ್ಲ. ಅದೇ ರೀತಿ ರಿ.ಸ.ನಂ. 260 ಕೆರೆಯಾಗಿದ್ದು, ಸದರಿ ಕೆರೆಯ ಪೂರ್ವ ದಿಕ್ಕಿನಲ್ಲಿ ಪ್ರತಿವಾದಿಯರ ಆಸ್ತಿಗಳು ಇವೆ ಎಂಬುದರ ಬಗ್ಗೆ ಯಾವುದೆ ವಿವಾದವಿರುವುದಿಲ್ಲ. ವಾದಿಯ ನಿಖರವಾದ ದಾವೇ ಏನೆಂದರೆ, ವಾದಿಯ ಹಸ್ತ ನಕ್ಷೆಯಲ್ಲಿ ತೋರಿಸಿರುವ 'B & C' ರೇಖಾ ಗುಂಟ ಜಾಗ ತನ್ನ ಜಮೀನಿಗೆ ಹೋಗುವಂತಹ ರಸ್ತೆಯಾಗಿದ್ದು, ಸದರಿ ರಸ್ತೆಯಲ್ಲಿ ಟ್ರ್ಯಾಕ್ಟರ್, ಚಕ್ಕಡಿ ಹಾಗೂ ಎತ್ತಿನಗಾಡಿಗಳು ಓಡಾಡಲು ಪ್ರತಿವಾದಿಯರು ತೊಂದರೆ ಮಾಡುತ್ತಿದ್ದಾರೆ ಹಾಗೂ ವಾದಿಗೆ ಓಡಾಡಲು ತೊಂದರೆಯನ್ನು ಮಾಡುತ್ತಿದ್ದಾರೆ ಎಂಬುದಾಗಿರುತ್ತದೆ. ಅದಕ್ಕೆ ತದ್ವಿರುದ್ದವಾಗಿ ಪ್ರತಿವಾದಿಯರು ವಾದಿಯು ಆಧಾರಿಸಿದ ರಸ್ತೆ ಕೆರೆಯ ಇರುವುದಿಲ್ಲ. ಬದಲಾಗಿ ಕೆರೆಯ ಏರಿ ಮೇಲೆ ಇರುವಂತಹ ರಸ್ತೆ 3.7 ಅಡ್ಡಿ ಇರುತ್ತದೆ. ಸದರಿ ರಸ್ತೆಯಲ್ಲಿ ಟ್ರ್ಯಾಕ್ಟರ್, ಚಕ್ಕಡಿ ವ್ಯವಸಾಯದ ಉಪಕರಣಗಳು ಹಾಗೂ ಎತ್ತಿನಗಾಡಿಗಳನ್ನು ತೆಗೆದುಕೊಂಡು ಹೋಗಲು ಸಾಧ್ಯವಾಗುವುದಿಲ್ಲ. ಸದರಿ ಜಾಗ ಹೆಚ್ಚು ಕಿರಿಯದಾರಿಗುವುದರಿಂದ ಹಾಗೂ ಸದರಿ ಕೆರೆಯ ಏರಿಯ ಮೇಲೆ ಟ್ರ್ಯಾಕ್ಟರ್ ಹಾಗೂ ಚಕ್ಕಡಿಗಳು ಹೋದರೆ ಸದರಿ ಏರಿ ಕುಸಿದು ಪ್ರತಿವಾದಿಗಳ ಆಸ್ತಿ ನಾಶ ಆಗುವ ಸಾಧ್ಯತೆ ಇರುತ್ತದೆ ಎಂಬುದಾಗಿ ಇರುತ್ತದೆ. ವಾದಿಯು ಹಾಜರುಪಡಿಸಿರುವಂತಹ ಗ್ರಾಮ ಪಂಚಾಯತಿ ಅಭಿವೃದ್ದಿ ಅಧಿಕಾರಿಗಳು ಹೊರಡಿಸಿದ ಕಛೇರಿ ಆದೇಶವನ್ನು ಗಮನಿಸಿದಾಗ, ಕೆರೆಯ ಏರಿಯ ಮೇಲೆ ರಸ್ತೆ ಇರುವುದಾಗಿ ಮೇಲ್ನೋಟಕ್ಕೆ ಕಂಡು ಬರುತ್ತದೆ. ಆದರೆ ಸದರಿ ರಸ್ತೆ ವಿಸ್ತೀರ್ಣ ಎಷ್ಟು ಇದೆ ಎಂಬುದರ ಬಗ್ಗೆ ಯಾವುದೇ ಅಂಶಗಳು ಕಂಡುಬರುವುದಿಲ್ಲ. ನಂತರ ಮುಂದುವರೆದು, ಸದರಿ ದಾಖಲೆಯನ್ನು ಪರಿಶೀಲಿಸಿದಾಗ ಪಂಚಾಯತಿ ಅಭಿವೃದ್ದಿ ಅಧಿಕಾರಿಗಳು ಪಂಚಾಯತಿ ಏರಿಯ ಮೇಲೆ ರೈತರು ಜಮೀನಿಗೆ ಓಡಾಡಲು ರಸ್ತೆಯ ಅಜು ಬಾಜು ಇದ್ದ ರೈತರು ತಂಟೆ ತಕರಾರು ಮಾಡುವ ಹಕ್ಕು ಇರುವುದಿಲ್ಲ ಎಂದು ಆದೇಶ ಹೊರಡಿಸಿರುತ್ತಾರೆ. ಸದರಿ ಆದೇಶವನ್ನು ಪ್ರಶ್ನಿಸಿ ಪ್ರತಿವಾದಿಯರು ಸಲ್ಲಿಸಿರುವ ಯಾವುದೇ ಮೇಲ್ಮನವಿ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಆದರೆ ಸದರಿ ಆದೇಶವನ್ನು ಕೂಲಂಕುಶವಾಗಿ ಪರಿಶೀಲಿಸಿದಾಗ ಪಂಚಾಯತಿ ಅಭಿವೃದ್ದಿ ಅಧಿಕಾರಿಗಳು ಸದರಿ ಆದೇಶವನ್ನು ಹೊರಡಿಸಿರುವುದು ರೈತರು ತಮ್ಮ ತಮ್ಮ ಜಮೀನುಗಳಿಗೆ ಕೆರೆಯ ರಸ್ತೆಯ ಏರಿಯ ಮೇಲೆ ಓಡಾಡಲಿಕ್ಕೆ ಮಾತ್ರ ಆಗಿರುತ್ತದೆ. ಆದರೆ ವಾದಿ ಈ ದಾವೆಯಲ್ಲಿ ತನ್ನ ಜಮೀನಿಗೆ ಹೋಗಲು ಟ್ರ್ಯಾಕ್ಟರ್, ಟ್ರೇಲರ್, ಎತ್ತಿನಗಾಡಿ ಹಾಗೂ ಚಕ್ಕಡಿಗಳನ್ನು ತೆಗೆದುಕೊಂಡು ಹೋಗಲು ಪ್ರತಿವಾದಿಯರು ಯಾವುದೇ ತೊಂದರೆ ಮಾಡದಂತೆ ನಿಷೇಧಾಜ್ಞೆಯನ್ನು ನೀಡಲು ಹೂಡಿರುವಂತಹ ದಾವೇಯಾಗಿರುತ್ತದೆ. ನಂತರ ಮುಂದುವರೆದು, ವಾದಿ

ಮತ್ತು ಪ್ರತಿವಾದಿಯರು ಹಾಜರುಪಡಿಸಿರುವಂತಹ ಪ್ಲಿಡಂಗ್ಸ್ ಹಾಗೂ ದಾಖಲೆಗಳನ್ನು ಪರಿಶೀಲಿಸಿದಾಗ, ವಾದಿಯ ಪರವಾಗಿ ಈ ಹಂತದಲ್ಲಿ ಮೇಲ್ನೋಟಕ್ಕೆ ಕಾಣುವ ದಾವೆ ಇದ್ದರೂ ಕೂಡ ಈ ಹಂತದಲ್ಲಿ ವಾದಿಯು ಸಲ್ಲಿಸಿರುವಂತಹ ಅರ್ಜಿಯನ್ನು ಪುರಸ್ಕರಿಸಿದರೇ, ಪ್ರತಿವಾದಿಯರಿಗೆ ಹಾಗೂ ಇತರೇ ರೈತರು ಯಾರು ಕೆರೆಯ ಪಕ್ಕದಲ್ಲಿ ವ್ಯವಸಾಯ ಮಾಡುತ್ತಿದ್ದಾರೆ ಅವರೆಲ್ಲರಿಗೂ ವಾದಿಗಿಂತ ಹೆಚ್ಚು ತೊಂದರೆ ಆಗುವ ಸಾಧ್ಯತೆ ಇರುತ್ತದೆ. ಸದರಿ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಈ ಹಂತದಲ್ಲಿ ವಾದಿಯು ಕೇಳಿರುವಂತಹ ತಾತ್ಕಾಲಿಕ ನಿಷೇಧಾಜ್ಞೆಯನ್ನು ಕೊಡಲು ಸೂಕ್ತವಾಗಿರುವುದಿಲ್ಲ ಎಂಬ ಅಭಿಪ್ರಾಯಕ್ಕೆ ಬಂದಿರುತ್ತೇನೆ. ಕಾರಣ ಸದರಿ ಅರ್ಜಿಯನ್ನು ಪುರಸ್ಕರಿಸಿದರೆ, ವಾದಿಗಿಂತಲೂ ಪ್ರತಿವಾದಿಯರಿಗೆ ಹೆಚ್ಚು ತೊಂದರೆ ಉಂಟಾಗುವ ಸಾಧ್ಯತೆ ಇರುತ್ತದೆ. ಈ ಎಲ್ಲಾ ಅಂಶಗಳನ್ನು ಪರಿಗಣಿಸಿ, ಈ ನ್ಯಾಯಲಾಯವು ಅಂಶ-1 ರಿಂದ ಅಂಶ-3 ನ್ನು ಕೂಡ ನಕಾರಾತ್ಮಕವಾಗಿ ಉತ್ತರಿಸುತ್ತೇನೆ.

**12.** **ಅಂಶ-4ಃ** ಈ ಮೇಲೆ ವಿವರಿಸಿರುವ ಕಾರಣಗಳು ಮತ್ತು ನಾನು ಹೊಂದಿದ ಅಭಿಪ್ರಾಯಗಳಿಗಾಗಿ ಈ ಕೆಳಗಿನಂತೆ ಅದೇಶಿಸಿದ್ದೇನೆಃ

## ಆದೇಶ

ದಿವಾಣಿ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 39 ನಿಯಮ 1 ಮತ್ತು 2 ಸಹವಾಚಕ ಕಲಂ 151 ರಡಿಯಲ್ಲಿ ವಾದಿಯು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆಃ1 ನ್ನು ತಿರಸ್ಕರಿಸಲಾಗಿರುತ್ತದೆ.

ಖರ್ಚಿನ ಬಗ್ಗೆ ಯಾವುದೇ ಆದೇಶ ಇಲ್ಲಾ.

**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,**
**ಹಿರೇಕೆರೂರು.**